ಕಲ್ಲಡ್ಕ ಶ್ರೀರಾಮ  ವಿದ್ಯಾಕೇಂದ್ರದ ವಿದ್ಯಾರ್ಥಿಗಳು ಕಲ್ಲಡ್ಕ ಪೇಟೆಯಲ್ಲಿ ಪ್ಲಾಸ್ಟಿಕ್ ಹೆಕ್ಕುವ ಮೂಲಕ, ಕಸ ಗುಡಿಸುವ ಮೂಲಕ ಪೇಟೆಯನ್ನು ಸ್ವಚ್ಛಗೊಳಿಸಿದರು. ರಾಷ್ಟ್ರೀಯ ಸ್ವಚ್ಛತಾ ಅಭಿಯಾನದಲ್ಲಿ ಪಾಲ್ಗೊಳ್ಳುವ ಮೂಲಕ ವಿದ್ಯಾಕೇಂದ್ರದಿಂದ ಪ್ರಕಟಿಸಲ್ಪಟ್ಟ ಸ್ವಚ್ಛತಾ ಜಾಗೃತಿ ಆಂದೋಲನದ ಕರಪತ್ರವನ್ನು ಹಂಚಿದರು. ಸತ್ತ ಬೆಕ್ಕು ಹಾಗೂ ಕೊಳೆತ ವಸ್ತುಗಳನ್ನು ತೆಗೆಯುವ ಮೂಲಕ ವಿದ್ಯಾರ್ಥಿಗಳು, ಶಿಕ್ಷಕರು, ಸಾರ್ವಜನಿಕರ ಗಮನ ಸೆಳೆದರು. ವಿದ್ಯಾ-ಕೇಂದ್ರದ ಸಂಚಾಕರು ಡಾ। ಪ್ರಭಾಕರ ಭಟ್, ಹಾಗೂ ಕಮಲಾ ಪ್ರ.ಭಟ್, ಅಧ್ಯಕ್ಷರು ನಾರಾಯಣ ಸೋಮಯಾಜಿ ಸ್ವಚ್ಚತಾ ಆಂದೋಲನದಲ್ಲಿ ಭಾಗವಹಿಸಿದ್ದರು



